

# ಮುಗಿದಂತೆ ತೋರಿದರೂ ಮುಗಿಯದ ದಾರಿ

ಇಪ್ಪತ್ತು ನಿಮಿಷಗಳ ಈ ಕಿರುಚಿತ್ರ, ಬದುಕಿನದೇ ಭಾಗವಾಗಿ ಇರುವಂತಿರುವ ದುರಂತಗಳು ಮತ್ತು ಅವುಗಳ ವಿರುದ್ಧ ಮನುಷ್ಯನ ಹೋರಾಟದ ನಡುವಿನ ಘರ್ಷಣೆಯನ್ನು ಘನವಾಗಿ ಚಿತ್ರಿಸುತ್ತದೆ.

ತರುಣ್ ಜೈನ್ ನಿರ್ದೇಶಿಸಿರುವ ‘ಅಮ್ಮಾ ಮೇರಿ’ ಕಿರುಚಿತ್ರ ಪ್ರೇಕ್ಷಕರ ಸೂಕ್ಷ್ಮ ಸಂವೇದನೆ ಮತ್ತು ಪ್ರಬುದ್ಧ ಆಸ್ವಾದನಾ ಗುಣದ ಮೇಲೆ ನಂಬಿಕೆ ಇರಿಸಿಕೊಂಡೇ ರೂಪಿಸಿದ ಕಿರುಚಿತ್ರ. ಕಲೆಯ ಬಗ್ಗೆ, ಕಥನಕ್ರಿಯೆಯ ಬಗ್ಗೆ ಪ್ರೇಕ್ಷಕ ತನ್ನಷ್ಟೇ ಪ್ರಬುದ್ಧ, ತಾನು ಅಂದುಕೊಂಡಿದ್ದನ್ನು, ಅನುಭವಿಸಿದ್ದನ್ನು ಅದರೆಲ್ಲ ಸಂಕೀರ್ಣತೆಯೊಟ್ಟಿಗೆ ಅವನೂ ಆಸ್ವಾದಿಸಬಲ್ಲ ಎಂಬ ನಂಬಿಕೆ ಇಲ್ಲದೆ ಇಂಥ ಕಿರುಚಿತ್ರ ಮಾಡಲು ಸಾಧ್ಯವಿಲ್ಲ.

ಹರಿಯಾಣದ ಕೆಳಮಧ್ಯಮ ವರ್ಗದ ಬಲರಾಮ್ ಎಂಬ ಮಧ್ಯವಯಸ್ಕನ ಬದುಕಿನ ಕೆಲವು ಬಿಂಬಗಳನ್ನು ತೋರಿಸುವ ಈ ಚಿತ್ರ, ಕತೆ ಹೇಳುವ ಉತ್ಸಾಹಕ್ಕಿಂತ, ಮನುಷ್ಯನ ಆಳದ ನೈತಿಕತೆಯ ನಿಜಸ್ವರೂಪಗಳನ್ನು ಶೋಧಿಸುವ ಉದ್ದೇಶವನ್ನು ಹೊಂದಿದೆ. ನಿರಂತರವಾಗಿ ಹರಿಯುತ್ತಿರುವ ಬದುಕಿನ ನದಿಯಲ್ಲಿ ಕೆಲವು ಬೊಗಸೆಗಳನ್ನು ಮೊಗೆದು ತೋರಿಸುವ ನಿರ್ದೇಶಕರು, ಆ ಮೂಲಕ ನದಿಯ ಆಳದ ಸುಳಿಗಳನ್ನೂ, ಮೈಮೇಲಿನ ರಭಸದ ತೆರೆಗಳನ್ನೂ ಒಟ್ಟೊಟ್ಟಿಗೇ ಧ್ಯಾನಿಸುವಂತೆ ಮಾಡುತ್ತಾರೆ.

ಬಲರಾಮ್ ತಂದೆಯ ಸಾವಿನೊಂದಿಗೇ ಕಿರುಚಿತ್ರ ಶುರುವಾಗುತ್ತದೆ. ಮನೆಯಲ್ಲಿ ದುಡಿಯುವ ವ್ಯಕ್ತಿ ಬಲರಾಮ್ ಒಬ್ಬನೇ. ಮದುವೆಯ ವಯಸ್ಸು ಮೀರುತ್ತಿರುವ ಮಗಳಿದ್ದಾಳೆ. ಅವಳ ಮದುವೆಯನ್ನು ಚೆನ್ನಾಗಿ ಮಾಡಬೇಕು ಎಂಬ ಆಸೆ ಬಲರಾಮ್‌ಗಿದೆ. ಹಾಗೆಯೇ ಅವಳ ಬಗ್ಗೆ ಅವನ ಆಳದಲ್ಲಿ ಕೊಂಚ ಅನುಮಾನವೂ ಇದೆ.

ಆದರೆ ಮಗಳ ಮದುವೆ ಮಾಡುವಷ್ಟು ಹಣ ಅವನ ಬಳಿ ಇಲ್ಲ. ವಯೋವೃದ್ಧ ಅಮ್ಮನ ಹೆಸರಿನಲ್ಲಿ ಎಫ್.ಡಿ.ಯಲ್ಲಿ ಒಂದಿಷ್ಟು ಹಣ ಇದೆ. ಆದರೆ ಅದು ಅಮ್ಮ ಸಾಯದೇ ಅವನಿಗೆ ಸಿಗುವುದಿಲ್ಲ.

ಒಂದು ತುದಿಯಲ್ಲಿ ವೃದ್ಧೆ ಅಮ್ಮ, ಇನ್ನೊಂದು ತುದಿಯಲ್ಲಿ ವಯಸ್ಸಿಗೆ ಬಂದ ಮಗಳು. ಮಗಳ ಮದುವೆಯ ಬಗ್ಗೆ, ಅಮ್ಮನ ಹೆಸರಿನಲ್ಲಿರುವ ಎಫ್.ಡಿ.ಯನ್ನು ಪಡೆದುಕೊಳ್ಳುವ ಬಗ್ಗೆ ಸಲಹೆ ಕೊಡುವವರು... ಹೀಗೆ ಬದುಕನ್ನು ಅಗ್ನಿಕುಂಡ ಮಾಡಿಕೊಂಡ ಮನುಷ್ಯನ ಆಳದ ನೈತಿಕ ಸ್ಥಿರತೆಯನ್ನು ಬಗೆಬಗೆಯಲ್ಲಿ ಶೋಧಿಸುತ್ತದೆ ‘ಅಮ್ಮಾ...’



**ಚಿತ್ರ: ಅಮ್ಮಾ ಮೇರಿ (ಹಿಂದಿ)**
ನಿರ್ದೇಶನ/ನಿರ್ಮಾಣ: ತರುಣ್ ಜೈನ್
ಛಾಯಾಗ್ರಹಣ: ಕರಣ್ ಥಪ್ಲಿಯಾಲ್
ಧ್ವನಿ ವಿನ್ಯಾಸ: ಶಾಜಿತ್ ಕೊಯಿರಿ
ಸಂಕಲನ: ರಾಜನ್ ಕುಮಾರ್ ಸಿಂಗ್, ವಿಶಾಲ್ ಚೌಹಾಣ್
ತಾರಾಗಣ: ಅನುರಾಗ್ ಅರೋರಾ, ದೇವಕಿರಾಣಿ, ದೀಕ್ಷಾ ಲಂಬಾ

ಬಹುತೇಕ ದೃಶ್ಯಗಳನ್ನು ಸ್ಟಿಲ್ ಕ್ಯಾಮೆರಾ ಬಳಸಿ ಚಿತ್ರೀಕರಿಸಿರುವುದು ಕಥನವನ್ನು ನೋಡುಗರಿಂದ ವಸ್ತುನಿಷ್ಠ ಅಂತರದಲ್ಲಿಯೇ ನಿಲ್ಲಿಸುತ್ತದೆ. ನಿರ್ದೇಶಕ ಬಿಟ್ಟಿರುವ ‘ಗ್ಯಾಪ್’ಗಳನ್ನು ಪ್ರೇಕ್ಷಕ ತುಂಬಿಕೊಳ್ಳುವಂತೆಯೂ ಪ್ರೇರೇಪಿಸುವ ಹಾಗಿದೆ.

ಬಲರಾಮ್ ಅಮ್ಮನನ್ನು ಬ್ಯಾಂಕಿಗೆ ಕರೆದುಕೊಂಡು ಹೋಗಿ ಎಫ್.ಡಿ. ಖಾತೆಗೆ ತನ್ನನ್ನು ನಾಮಿನಿಯನ್ನಾಗಿಸಿಕೊಂಡು ಬರುವುದು ಈ ಚಿತ್ರದ ತೀವ್ರವಾದ ಸನ್ನಿವೇಶಗಳಲ್ಲೊಂದು. ಆದರೆ ಇಂಥ ದೃಶ್ಯದಲ್ಲಿಯೂ ಯಾವುದನ್ನೂ ವಾಚ್ಯವಾಗಿ ಹೇಳದೆ ಬಹುಸೂಕ್ಷ್ಮವಾಗಿ ಸೂಚಿಸುತ್ತ ಹೋಗುವ ನಿರ್ದೇಶಕರ ಸಂಯಮ ಅಚ್ಚರಿಹುಟ್ಟಿಸುತ್ತದೆ.

ಬೈಕ್‌ನಲ್ಲಿ ಹಿಂದೆ ಕೂತ ಅಮ್ಮ ರಸ್ತೆಯಲ್ಲಿ ಬಿದ್ದರೆ ಬೀಳಲಿ ಎಂದು ಮನಸಲ್ಲಿಯೇ ಅಂದುಕೊಂಡನೇ? ಅಮ್ಮನ ಸಾವು ಎಫ್.ಡಿ. ಹಣ ಪಡೆಯುವ ದಾರಿಯಾಗಿ ಕಾಣುತ್ತಿದ್ದ ಬಲರಾಮನಿಗೆ, ರಸ್ತೆ ಅಪಘಾತದಿಂದ ಕೂದಲೆಳೆಯಂತರದಲ್ಲಿ ತಪ್ಪಿಸಿಕೊಂಡಾಗ ಆಗುವ ಮಾನಸಿಕ ಆಘಾತ ಅಮ್ಮನ ನೋಡುವ ರೀತಿಯಲ್ಲಿ ಮಾಡಿದ ಪಲ್ಲಟ ಎಂಥದ್ದು? ಏದುಸಿರು ಬಿಡುತ್ತ, ಬೈಕ್ ಹಿಂಬದಿ ಗಟ್ಟಿ ಹಿಡಿದು ಕೂತ ಅಮ್ಮನ ಮುಖದ ಮೇಲಿನ ಸಾವಿನ ಭಯದ ದರ್ಶನವನ್ನು ನಿರ್ದೇಶಕರು ಮಾಡಿಸುವುದು ಬಲರಾಮನ ಕಣ್ಣುಗಳಲ್ಲೇ... ಇಂಥ ಸೂಕ್ಷ್ಮಗಳಿಂದಲೇ ಈ ಕಿರುಚಿತ್ರ ಆ ಕ್ಷಣದ ರೋಚಕತೆಯನ್ನು ಮೀರಿ ನಮ್ಮೊಳಗೆ ಗಾಢವಾಗಿ ಇಳಿಯುತ್ತದೆ. ಇಂಥ ಗಾಢ ಅನುಭವವನ್ನು ಹಿನ್ನೆಲೆ ಸಂಗೀತ ಇನ್ನಷ್ಟು ತೀವ್ರವಾಗಿ ನಮಗೆ ದಾಟಿಸುತ್ತದೆ.

ಕಿರುಚಿತ್ರದ ಕೊನೆಯೂ ಅಷ್ಟೇ ಗಾಢವಾಗಿದೆ. ಅಮ್ಮನ ಎಫ್.ಡಿ. ಖಾತೆಗೆ ತನ್ನನ್ನು ನಾಮಿನಿಯಾಗಿಸಿಕೊಂಡು ಬಲರಾಮ ಬರುತ್ತಾನೆ. ದಾರಿಯಲ್ಲಿಯೇ ಅವನ ಮಗಳು ಬೇರೊಬ್ಬನ ಜೊತೆ ಬೈಕ್‌ನಲ್ಲಿ ಹೊರಟು ಹೋಗುತ್ತಾರೆ. ಮುಖಾಮುಖಿಯಾದರೂ ಅವನಿಗೆ ಮಗಳು ಹೊರಟುಹೋಗುತ್ತಿರುವುದು ಗೊತ್ತಾಗುವುದೇ ಇಲ್ಲ. ಸಹಜವಾಗಿ ಬದುಕಿನ ಹರಿವನ್ನು ಕೃತಕವಾಗಿ ತಿರುಗಿಸಲು ಯತ್ನಿಸುವ ಮನುಷ್ಯನಿಗೆ ಬದುಕು ಅಳತೆ ಎಂದಿಗೂ ಸಿಕ್ಕಲಾರದು ಎಂಬ ಸೂಚನೆಯೊಂದಿಗೇ ಕಿರುಚಿತ್ರ ಕೊನೆಗೊಳ್ಳುತ್ತದೆ.

ಕಿರುಚಿತ್ರ ಮಾಧ್ಯಮದ ಸಾಧ್ಯತೆಗಳ ಸಮರ್ಥ ದುಡಿತಾಯ, ಕಥನದ ಧ್ವನಿಸಾಧ್ಯತೆ, ಕಥನ ಮತ್ತು ತಾಂತ್ರಿಕತೆಯ ಹದವಾದ ಮಿಳಿತ, ಕಲಾವಿದರ ಪ್ರಬುದ್ಧ ಅಭಿನಯ ಎಲ್ಲದಕ್ಕೂ ಒಳ್ಳೆಯ ಉದಾಹರಣೆಯಾಗಿ ‘ಅಮ್ಮಾ ಮೇರಿ’ ಕಿರುಚಿತ್ರ ನೋಡಬಹುದು.

ಈ ಕಿರುಚಿತ್ರ ವೀಕ್ಷಣೆಗೆ bit.ly/2Lwcakt ಕೊಂಡಿ/ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.